ಕೆ.ಎಂ. ವಿಭೂತಿ, ಹರಿಹರ

ನಮ್ಮ ರಾಷ್ಟ್ರೀಯ ಪ್ರಾಣಿಯಾಗಿ ಹುಲಿಯ ಬದಲು ಶ್ರಮದ ಪ್ರತೀಕವಾದ ಕತ್ತೆಯನ್ನು ಮಾಡಿದರೆ ಹೇಗೆ?



ಆಗದು. ಕತ್ತೆಯನ್ನು ಆಗಲೇ ದೇಶದ ಪುಢಾರಿಗಳ ಪ್ರತೀಕವೆಂದು ಆರಿಸಲಾಗಿದೆಯಂತೆ.

ವಿ. ಹೇಮಂತಕುಮಾರ್, ಬೆಂಗಳೂರು

ಭಕ್ತರೆಲ್ಲರೂ ಭಕ್ತ ಕುಂಬಾರ ಆಗಬಲ್ಲರೆ?

ನಟರೆಲ್ಲರೂ ಅಮಿತಾಭ್, ನಟಿಯರೆಲ್ಲರೂ ಶ್ರೀದೇವಿ ಆದಾಗ ಇದೂ ಆಗುತ್ತದಂತೆ.

ಅಮರಯ್ಯಾ ಪತ್ರಿಮಠ, ಸುರಪುರ

‘ಅದೃಷ್ಟ’ ಯಾವುದರಲ್ಲಿ ಅಡಗಿದೆ?

ಕಸಾಪದ ಎಂಟು ಸಂಪುಟಗಳ ನಿಘಂಟಿನ ಮೊದಲ ಸಂಪುಟದಲ್ಲಿ.

ಜೆ. ಪ್ರದೀಪಕುಮಾರ್, ಹೂವಿನಹಡಗಲಿ

ಇಂದಿನ ಯುವಕ ಯುವತಿಯರಿಗೆ ನಿದ್ರೆ, ಹಸಿವೆ, ಏಕಾಗ್ರತೆ ಕಡಿಮೆಯಾಗುತ್ತಿರಲು ಕಾರಣವೇನು?



ಹಸ್ತರಾಕ್ಷಸನೇ – ಮೊಬೈಲಾತುರಾಣಾಂ ನ ನಿದ್ರಾ ನ ಬುದ್ಧಿಃ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

ಗಂಡ ಮೊದಲು ಸಾಯಬೇಕೋ, ಹೆಂಡತಿ ಮೊದಲು ಸಾಯಬೇಕೋ?

ಸುಬ್ಬಯ್ಯನಾಯ್ಡು ದಂಪತಿಗಳಂತೆ ಒಟ್ಟಿಗೆ ಹೊರಡುವುದೇ ಶ್ರೇಷ್ಠ.

ಪಿ.ಜೆ. ರಾಘವೇಂದ್ರ, ಮೈಸೂರು

ಸ್ವಾರ್ಥ ರಾಜಕಾರಣಿಗಳನ್ನು ನಿಸ್ವಾರ್ಥ ಎತ್ತುಗಳಿಗೆ ಹೋಲಿಸುವುದು ಸರಿಯೆ?

ಅದು ಆ ಎತ್ತಲ್ಲ. ಕೈ ಎತ್ತು, ಕಾಲೆತ್ತು, ದುಡ್ಡೆತ್ತು, ಮಚ್ಚೆತ್ತು ಎನ್ನುತ್ತಲೇ ಬೆಳೆದವರಿಗೆ ‘ಎತ್ತು’ ಅಡ್ಡಹೆಸರಂತೆ.

ಜೀವಿ, ಗೊಂಡೇದಹಳ್ಳಿ

ಲೇವಾದೇವಿ ವ್ಯವಹಾರದವರಿಗೆ ದೇವಿಯರ ಸಂಗವೇ ಜಾಸ್ತಿ. ಏಕೆ?

‘ದೇ, ದೇ’ ಎನ್ನುತ್ತಾ ಖರ್ಚೇರಿದಾಗ ಆ ದೇವಿಯರ ಕಷ್ಟಕ್ಕಾಗುವವರು ಲೇವಾದೇವಿಯರೇ.

ಸಿ.ಕೆ. ಗಣಪ್ಪನವರ, ಮುಂಡರಗಿ

ನೀತಿ ಬೋಧನೆಗಿಂತ ಜಾತಿಪಾತ ಹೇಳುವ ಕೆಲವು ಸ್ವಾಮಿಗಳಿದ್ದಾರಲ್ಲ...?

ಯಾವುದೇ ಗುರುವಾಗಲಿ, ತನಗೆ ಗೊತ್ತಿರುವಷ್ಟನ್ನು ಮಾತ್ರ ಹೇಳಿಕೊಡಬಲ್ಲ.

ರಾಜೇಂದ್ರ ಹೆಗಡೆ, ಹಾವೇರಿ

‘ನೀವು ಕೇಳಿದಿರಿ’ಯ ರಾಮ್ ಮರೆಯದ ಮಾಣಿಕ್ಯ ಎಂದು ಸುಂದರಿ ಹೊಗಳಿ ಮುದ್ದಿಸಿದಳಲ್ಲ...?

ನಂತರ ಓದಿದವರು ಪೇಜೆಲ್ಲ ಒದ್ದೆಯಾಯಿತು ಎಂದು ಪಿರಿಪಿರಿ ಮಾಡಿದರಂತೆ.

ಮಲ್ಲಿಕಾರ್ಜುನ, ಸುರಧೇನುಪುರ

ಮಣ್ಣು ತಿಂದರೂ ಮರೆಯಲ್ಲಿ ತಿನ್ನಬೇಕು ಎಂದು ಏಕೆ ಹೇಳಿದ್ದಾರೆ?

ಮಣ್ಣೊಡನೆ ತೋಪುಗಳನ್ನೇ ತೋಪಾಗಿಸುವುದರಿಂದ (ಸಿಬಿಐನ) ದೃಷ್ಟಿ ತಾಗೀತೆಂದು.

ಹರಿತಸ, ಬೆಂಗಳೂರು

ಸಮಯಕ್ಕೂ, ಸಂಯಮಕ್ಕೂ ಏನು ವ್ಯತ್ಯಾಸ?

ಸಮಯಕ್ಕೆ ಸಂಯಮವಿಲ್ಲ; ಸಂಯಮಕ್ಕೆ ಸಮಯವಿದೆ.

ಬಾ.ರಂ. ಸುರೇಶ, ಶಿವಮೊಗ್ಗ

ಸಂಸಾರ ಸಾಕಾಗಿದೆ. ಸನ್ಯಾಸಿ ಆಗಬೇಕೆಂದಿದ್ದೇನೆ. ಅದಕ್ಕೇನು ಮಾಡಬೇಕು?

ಸ್ವೆಟರ್ ಇಲ್ಲದೆ ಹಿಮಾಲಯಕ್ಕೆ ಹೋಗಿ. ನಂತರದ್ದನ್ನು ಅಲ್ಲಿ ತಿಂಗಳಿದ್ದ ನಂತರ ಹೇಳುವೆ.

ಟಿ.ಎಸ್. ಪ್ರತಿಭಾ, ಚಿತ್ರದುರ್ಗ

ಬಣ್ಣ ಬಯಲಾಗುವುದು ಎಂದರೆ ಏನು ಅರ್ಥ ರಾಮ್‌ಜಿ?

ಮತ್ತೆ ಫ್ರೆಶ್ ಮೇಕಪ್ಪಿನ ಅಗತ್ಯವಿದೆಯೆಂದು.

## ಬಹುಮಾನಿತ ಪ್ರಶ್ನೆ

ಕೆ. ವಿಶ್ವನಾಥನ್, ಕೊಯಿಮತ್ತೂರು

ದಾಂಪತ್ಯದಲ್ಲಿ ಜಗಳವಿಲ್ಲದಿರಲು ಏನು ಮಾಡಬೇಕು?

ವಿರಸವನ್ನೂ ಸರಸಕ್ಕೆ ತಿರುಗಿಸುವ ಕಲೆಯನ್ನು ರೂಢಿಸಿಕೊಳ್ಳಬೇಕು.

ಅನಸೂಯಾ ಟಿ. ಕೇದಿಗೆಮನೆ

ಉತ್ತರ ಕೊಟ್ಟೂ ಕೊಟ್ಟೂ ಸುಸ್ತಾಗಲ್ವಾ ಉತ್ತರಭೂಪರೆ?

ಇದು ನನಗೆ ಸುಸ್ತಾದಾಗ ಶಕ್ತಿ ತುಂಬುವ ಟಾನಿಕ್.

ಕೆ.ಪಿ. ರಾಮಗುಂಡಿ, ಬೈಲಹೊಂಗಲ

ತಗ್ಗಿದ್ದಲ್ಲಿ ನೀರು. ದುಡ್ಡಿದ್ದಲ್ಲಿ?

ಕಬ್ಬಿಣದ ಬೀರು.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

ಮದುವೆಯಲ್ಲಿ ಹೆಣ್ಣನ್ನು ಏಳು ಹೆಜ್ಜೆ ಹಾಕಿಸುವ ಉದ್ದೇಶ?



ಮುಂದೆ ಏಳು ದಿನವೂ ಪತಿಗೆ ಏಳು ಎಂದು ಎಬ್ಬಿಸಿ ಚುರುಕಾಗಿಸಬೇಕೆಂಬ ಸಂದೇಶವಂತೆ.

ಎಂ.ಸಿ. ಧನ್ಯತಾ, ಬೆಂಗಳೂರು

‘ಇದಿರ ಹಳಿಯಲು ಬೇಡ’ ಎಂಬ ತತ್ವ ಇಂದಿನ ರಾಜಕಾರಣಿಗಳಿಗೆ ತಿಳಿದಿಲ್ಲವೆ?

ತಿಳಿದಿದೆ. ಅದಕ್ಕೇ ಇದಿರಾದಾಗ ಹೊಗಳುತ್ತಾರೆ; ದೂರ ಹೋಗಿ ತೆಗಳುತ್ತಾರೆ.

ಚಾರ್ವಾಕ ಶ್ರೀನಿವಾಸನ್, ಬೆಂಗಳೂರು

ಭವ್ಯ ಬಂಗಲೆ ಕಟ್ಟಿ ಗೃಹಪ್ರವೇಶದಂದು ಆಹ್ವಾನಿತರಿಗೆ ರಸ್ತೆಯಲ್ಲಿ ಕೂಡಿಸಿ ಭೂರಿ ಭೋಜನ ಹಾಕುವರಲ್ಲ?

ಎಷ್ಟೋ ಜನರನ್ನು ಬೀದಿಗಿಳಿಸಿ ತಾನು ಬಂಗಲೆಗೆ ಬಂದೆನೆಂದು ಸೂಚಿಸಲಿರಬಹುದು!

■ ರಾಮ್